# ಹೆಸರು ದಾನ ಮಾಡಿದ ಕವಿ

ನೇತ್ರದಾನ, ಅನ್ನದಾನ, ಗೋದಾನ, ಭೂದಾನ, ದೇಹದಾನ– ಹೀಗೆ, ವಿವಿಧ ದಾನಗಳ ಮೂಲಕ ದಾನಿಗಳೆನ್ನಿಸಿಕೊಂಡ 'ಕರ್ಣ – ಶಿಬಿ ಪರಂಪರೆ' ದೊಡ್ಡದು. ಆದರೆ 'ಹೆಸರು ದಾನ'ದ ಬಗ್ಗೆ ಕೇಳಿದ್ದೀರಾ? ಕನ್ನಡದ ಕವಿಯೊಬ್ಬರು ತಮ್ಮ ಹೆಸರು ದಾನದ ಮೂಲಕ ಗೆಳೆಯರಿಗೆ ನೆರವಾದ ಪ್ರಸಂಗವಿದು!

ಕಿರುತೆರೆ ತಂತ್ರಜ್ಞರ ತಂಡವೊಂದು ಧಾರಾವಾಹಿ ನಿರ್ಮಾಣಕ್ಕೆ ಮುಂದಾಯಿತು. ಧಾರಾವಾಹಿಯನ್ನೇನೋ ಕಷ್ಟಪಟ್ಟು ನಿರ್ಮಿಸಬಹುದು; ಆದರೆ ಅದರ ಪ್ರಸಾರಕ್ಕೆ ಸಂಬಂಧಿಸಿದ ವಾಹಿನಿಯಿಂದ ಹಸಿರು ನಿಶಾನೆ ಪಡೆಯುವುದು ತಮಾಷೆಯ ಮಾತೇ?

ಗೆಳೆಯರಿಂದ ಐಡಿಯಾಗಳ ಸುರಿಮಳೆಯಾಯಿತು. ಕಿಲಾಡಿಯೊಬ್ಬ ಹೇಳಿದ– 'ಈ ಧಾರಾವಾಹಿಯ ಕಥೆಗಾರನ ಹೆಸರಿನ ಜಾಗದಲ್ಲಿ ಪ್ರಸಿದ್ಧ ಕವಿಯ ಹೆಸರು ಹಾಕೋಣ. ಅವರಿಗೆ ರಾಜಕೀಯದ ನಂಟೂ ಇದೆ. ಆ ಕಾರಣದಿಂದಾಗಿ ಪ್ರಸಾರದ ಅನುಮತಿ ಸುಲಭವಾಗಿ ಸಿಗುತ್ತದೆ'. ಈ ಐಡಿಯಾ ಎಲ್ಲರಿಗೂ ಒಪ್ಪಿಗೆಯಾಯಿತು. ತಮ್ಮ ಹೆಸರು 'ದಾನ' ಮಾಡಲು ಕವಿಯೂ ಒಪ್ಪಿಕೊಂಡರು. ಟೈಟಲ್ ಕಾರ್ಡ್‌ನಲ್ಲಿ ತನ್ನ ಹೆಸರು ಬಿಟ್ಟುಕೊಡಲಿಕ್ಕೆ ಮೂಲ ಕಥೆಗಾರ ಬೇಸರದಿಂದಲೇ ಒಪ್ಪಿಕೊಂಡ.

ಮತ್ತೊಂದು ಐಡಿಯಾ ಬಂತು. ಅದರ ಪ್ರಕಾರ, ಕವಿಯಿಂದಲೇ ಶೀರ್ಷಿಕೆ ಗೀತೆ ಬರೆಸುವುದು ಎಂದಾಯಿತು. ಗೆಳೆಯರ ತಂಡ ತಮ್ಮ ಕಾರ್ಯಾಚರಣೆ ಜಾರಿಗೆ ತರುವ ಉದ್ದೇಶದಿಂದ ಕವಿಯನ್ನು ಭೇಟಿ ಮಾಡಿತು. ಗೀತೆ ಬರೆದುಕೊಡಲು ಒಪ್ಪಿಕೊಂಡ ಕವಿ, 'ಹಾಡು ರಚಿಸಲಿಕ್ಕಾಗಿ ಕಥೆಯ ತಿರುಳು ಹೇಳಿ' ಎಂದರು. ಧಾರಾವಾಹಿಯ ನಿರ್ದೇಶಕ ಕಥೆ ಹೇಳತೊಡಗಿದ.

ಸಭ್ಯ ವ್ಯಕ್ತಿಯೊಬ್ಬನ ಉಪಸಂಬಂಧದ ಕಥೆಯನ್ನು ನಿರ್ದೇಶಕರು ರಸವತ್ತಾಗಿ ಹೇಳತೊಡಗಿದರು. 'ಸ್ವಲ್ಪ ನಿಲ್ಲಿಸಿ' ಎಂದರು ಕವಿ. 'ಯಾಕೆ ಸರ್' ಅಂದರು ನಿರ್ದೇಶಕರು. 'ಇದು ನನ್ನ ಕಥೆ ಕಣಯ್ಯಾ' ಅಂದರು ಕವಿ. ಗೆಳೆಯರು ಒಬ್ಬರ ಮುಖವನ್ನೊಬ್ಬರು ನೋಡಿಕೊಳ್ಳತೊಡಗಿದರು. 'ಹೌದು ಸರ್, ಟೈಟಲ್ ಕಾರ್ಡ್‌ನಲ್ಲಿ ನಿಮ್ಮದೇ ಹೆಸರು ಇರುತ್ತದೆ' ಎಂದರು ನಿರ್ದೇಶಕರು. 'ಅದಲ್ಲಯ್ಯ ವಿಷ್ಯ. ಇದು ನನ್ನದೇ ಕಥೆ' ಎಂದು ಕವಿ ಮತ್ತೆ ಒತ್ತಿ ಹೇಳಿದರು. ನಿರ್ದೇಶಕರಿಗೆ ಅಚ್ಚರಿ– 'ಇಂಥ ಕಥೆಯನ್ನು ನೀವೂ ಬರೆದಿದ್ದೀರಾ ಸರ್?' ಎಂದರು. ಕವಿ ತಣ್ಣನೆ ದನಿಯಲ್ಲಿ ಹೇಳಿದರು– 'ನಾನು ಹೇಳುತ್ತಿರೋದು ಪುಸ್ತಕದ ಕಥೆ ಅಲ್ಲವಯ್ಯಾ, ಬದುಕಿನ ಕಥೆ. ನೀವು ಹೇಳ್ತಿರೋದು ನನ್ನ ಬದುಕಿನ ಕಥೆಯನ್ನೇ ಅಲ್ಲವಾ?'

ಕವಿಯ ಮಾತು ಕೇಳಿ ನಿರ್ದೇಶಕರು ಮತ್ತವರ ಮಿತ್ರಮಂಡಲಿ ಮಾತು ಕಳೆದುಕೊಂಡಿತು. 'ಹೆಸರೊಬ್ಬರದು, ಬಸಿರೊಬ್ಬರದು' ಎನ್ನುವ ಮಾತು ಹೀಗೆ ಸುಳ್ಳಾಗಬೇಕೆ?

**–ಮಹತಿ**

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd.,Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68